ಹೋಗಿದ್ದರು. ತಿಂದವರೆಲ್ಲ ಆಮ್ಲೇಟ್ ತುಂಬಾ ಚನ್ನಾಗಿದೆ ಎಂದು ತಾರೀಫು ಮಾಡಿ ಹೋಗಿದ್ದರು. ಆವೊತ್ತು ಸಂಜೆ ಏಳು ಗಂಟೆಗೆಲ್ಲ ಮೂವತ್ತೈದು ಆಮ್ಲೇಟುಗಳು ಮಾರಾಟವಾಗಿದ್ದವು. ಕಡೆಯ ಆಮ್ಲೇಟನ್ನು ತಾನೂ ಅನ್ನ ಸಾರಿನ ಜೊತೆಗೆ ನಂಚಿಕೊಂಡು ತಿಂದಿದ್ದಳು. ಯಾರೂ ಸಾಲ ಹೇಳಿ ಹೋಗಿರಲಿಲ್ಲ. ಮುನ್ನೂರೈವತ್ತು ರೂಪಾಯಿಗಳನ್ನು ಮನೆ ದೇವರಾದ ಆಂಜನೇಯ ಸ್ವಾಮಿ ಪಟದ ಮುಂದೆ ಇಟ್ಟು ಕೈ ಮುಗಿದು ನೆಮ್ಮದಿಯಿಂದ ನಿದ್ದೆ ಹೋಗಿದ್ದಳು.

ಮಾರನೆಯ ದಿನ ಊರ ತುಂಬಾ ಅಕ್ಕಯ್ಯಮ್ಮನದೆ ಮಾತು. ಲೋಕೋ ಭಿನ್ನ ರುಚಿ ಎಂಬಂತೆ ಊರಿನಲ್ಲಿ ಕೆಲವರು ಅಕ್ಕಯ್ಯಮ್ಮನ ಕೆಲಸವನ್ನು ಕೊಂಡಾಡಿದ್ದರೆ ಮತ್ತೆ ಕೆಲವರು ಅಪಹಾಸ್ಯದ ಮಾತುಗಳನ್ನಾಡಿಕೊಂಡಿದ್ದರು. ''ಅಕ್ಕಯ್ಯಮ್ಮ ಛಲಗಾತಿ ಬಿಡ್ರಿ, ಅಂಗನವಾಡಿ ಕೆಲಸ ಬಿಡಿಸಿದ್ರು ಅಂತ ಎದೆಗುಂದ್ಲಿಲ್ಲ. ನೋಡ್ರಿ ವಾರದಲ್ಲೆ ಎಂಥ ಪ್ಲಾನ್ ಮಾಡೆವ್ಳೆ. ನಾನೂ ಇವೊತ್ತೊಂದು ಆಮ್ಲೇಟ್ ತಿಂದ್ ಬರ್ತೀನಿ.'' ಎಂದು ನಿಂಗಮ್ಮನೋರ ವೆಂಕಟ್ರಮಣ ಹಟ್ಟಿ ಮುಂದೆ ಎಮ್ಮೆಯ ಮೈ ತೊಳೆಯುತ್ತಾ ಕೇರಿಯಲ್ಲಿ ಓಡಾಡುತ್ತಿದ್ದವರೊಂದಿಗೆ ನಾಲಿಗೆ ಬೆಳೆಸಿದ್ದ. ಊರ ಮುಂದಿನ ಬೋರ್ ವೆಲ್ ಹತ್ತಿರ ನೀರನ್ನು ಒತ್ತುತ್ತಾ ಈರಣ್ಣೋರ ರಂಗಪ್ಪ, ''ಭೇಷಾಯ್ತು ಬಿಡ್ರಿ, ಬಾಯಿಗೀಯಿ ಕೆಟ್ಟಾಗ ಅಕ್ಕಯ್ಯಮ್ಮನ ಆಮ್ಲೇಟ್ ತಗಂಬಂದು ಊಟದ ಜೊತೆ ನಂಜ್ಕಂಡ್ರಾಯ್ತು. ಇವೊತ್ತಿನ ದಿನ ಹತ್ರುಪಾಯ್ಗೆ ಒಂದ್ ಚಾಕ್ಲೇಟೂ ಬರೋದಿಲ್ಲ. ಅಂತೋದ್ರಾಗೆ ಹತ್ರುಪಾಯ್ಗೊಂದು ಆಮ್ಲೇಟ್ ಕೊಡ್ತಾಳೆ ಅಂದ್ರೆ ಮೆಚ್ಕೊಬೇಕಾದ್ದೆ.'' ಎಂದು ಬೋರ್‌ವೆಲ್ ಹತ್ತಿರ ನೀರಿಗೆ ಬಂದವರೊಂದಿಗೆ ಭಾಷಣದ ರೀತಿಯಲ್ಲಿ ಮಾತನಾಡಿದ್ದ. ಕಾಳ್ರಂಗಮಜ್ಜಿಯೋರ ಗೂನ್ ಸೀನಪ್ಪ, ''ನಮ್ಮಂಥ ಹಲ್ಲಿಲ್ಲೋರ್ಗೆ ಬಾಡ್ ತಿಂಬೋಕಾಗಲ್ಲ. ಮನೇಲಿ ಬಾಡ್ ಮಾಡಿದ್ದ ದಿನ ನಾನು ಅಕ್ಕಯ್ಯಮ್ಮನ ಹತ್ತಿರ ಹೋಗಿ ಬಿಸಿಬಿಸಿ ಎರಡು ಆಮ್ಲೇಟ್ ಹಾಕಿಸ್ಕೊಂಡ್ ಬಂದ್ರಾಯ್ತು. ಅತ್ತ ಬಾಡ್ತಿನ್ನೊ ಖಾಯಶ್ ಖತಂ ಆಗ್ತದೆ.'' ಎಂದು ಬೊಚ್ಚು ಬಾಯಿ ತುಂಬಾ ಕೆಕ್ಕೆಕ್ಕೆ ಎಂದು ನಕ್ಕಿದ್ದ. ಇನ್ನು ಊರಲ್ಲಿ ಎಣ್ಣೆ ಪಾರ್ಟಿಗಳು, ''ಸರೋಯ್ತು ಬಿಡ್ರಲೇ ಅತ್ತ, ಸಾಯಂಕಾಲಕ್ಕೆ ಅಕ್ಕಯ್ಯಮ್ಮನ್ತಾವ ಒಂದೆರ್ಡ್ ಆಮ್ಲೇಟ್ ಹಾಕಿಸಿಕೊಂಡೋದ್ರೆ ಕಣದಲ್ಲಿ ಕುಂತ್ಕಂಡು ಒಂದು ಕ್ವಾಟರು ಹತ್ ನಿಮಿಷದಲ್ಲಿ ಸಲೀಸಾಗಿ ಹಾಕ್ಕೊಂಡು ಮನೆ ಕಡೆ ಬರ್ಬೋದು. ಆಮ್ಲೇಟ್‌ಗೆ ಅಂತ ಒಂದೂವರ್ ಮೈಲಿ ಪುರವರಕ್ಕೆ ಹೋಗೋದೆ ತಪ್ಪು.'' ಎಂದು ಬಾಯಲ್ಲಿ ಜೊಲ್ಲು ಸುರಿಸಿಕೊಂಡು ಮಾತನಾಡಿಕೊಂಡಿದ್ದರು. ಹೀಗೆ ಊರಲ್ಲಿ ಬಹುತೇಕ ಗಂಡಸರು ಅಕ್ಕಯ್ಯಮ್ಮನ ಕೆಲಸವನ್ನು ಮೆಚ್ಚಿಕೊಳ್ಳುತ್ತಿದ್ದರೆ ಬಹುತೇಕ ಹೆಂಗಸರು ಹೊಟ್ಟೆಯುರಿಸಿಕೊಂಡು ವಕ್ರವಾಗಿ ಮಾತುಗಳನ್ನುದುರಿಸಿದ್ದರು. ''ನೋಡಿದ್ರೆನಮಯ್ಯ ಮೆಳ್ಳಗಣ್ಣೋಳು ಎಂಥ ಪ್ಲಾನ್ ಹಾಕೆವ್ಳೆ. ನಾವೇನೋ ಯಬ್ಬುಡ್ತಬ್ಡಿ ಅಂದ್ಕೊಂಡಿದ್ವಿ.'' ''ಇರೋಳೊಬ್ಳು, ಬೇಕಾಗಿರೋದು ಒಂದೀಟನ್ನ ಒಂದ್ ಸೌಟು ಸಾರು. ಅದುಕ್ಕೆ ಈಪಾಟಿ ಪಡಿಪಾಟ್ಲು ಬೀಳ್ಬೇಕ.'' ''ಎಷ್ಟ್ ದಿನ ನಡೆಸ್ತಾಳೋ ಮೇರ್ಬಾನಿನ ನೋಡಾನೇಳ್ರಿ.'' ''ಕುಡುಕುರ್ಗೋಳ್ಗೆ ಸರೋಯ್ತು. ಕುಡಿಯೋಕೆ ಕುಕ್ಕೋದಲ್ದೆ ಅಕ್ಕಯ್ಯಮ್ಮನ ಆಮ್ಲೇಟ್ಗೂ ದುಡ್ಡು ಸುರಿತಾರಿನ್ಮೇಲೆ.'' ಮುಂತಾಗಿ ಊರಿನ ಹೆಂಗಸರು ಹೊಟ್ಟೆಗೊಂದಿಷ್ಟಿಷ್ಟು ಬೆಂಕಿ ಹಾಕಿಕೊಂಡೆ ಪಿಸಪಿಸ ಪಿಸುಗುಟ್ಟಿಕೊಂಡಿದ್ದರು. ಈ ಯಾವ ಮಾತುಗಳೂ ಅಕ್ಕಯ್ಯಮ್ಮನ ಆಮ್ಲೇಟ್ ಹೆಂಚಿನ ಆಸುಪಾಸಿಗೂ ಸುಳಿದಿರಲಿಲ್ಲ.



ಮಾರನೆಯ ದಿನ ಹಿಟ್ಹೊತ್ತಿಗೆಲ್ಲಾ ಹದಿನೈದಿಪ್ಪತ್ತು ಜನ ಬಂದು ಆಮ್ಲೇಟುಗಳಿಗೆ ಬೇಡಿಕೆ ಇಟ್ಟಿದ್ದರು. ಅವರೆಲ್ಲರೂ ಊಟದ ಜೊತೆ ನಂಜಿಕೊಳ್ಳಲು ಆಮ್ಲೇಟ್ ಖರೀದಿಗೆ ಬಂದಿದ್ದರು. ಸರಿ,